**ಅಸಲ ದಾವಾ ನಂ.276/2022**
**ಪಿಡಬ್ಲ್ಯೂ:01**

**ದಿನಾಂಕ: 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ವಕೀಲರಿಂದ**

1) ದಾವೆಯ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ದಾವೆ ದಾಖಲಿಸುವುದಕ್ಕಿಂತ ಮುಂಚೆ ಸರ್ಕಾರಕ್ಕೆ ನೋಟಿಸು ನೀಡಬೇಕಾಗಿದ್ದು, ಅದನ್ನು ನೀಡಿಲ್ಲ ಎಂದರೆ ಸರಿ. ನಾನು ಒಟ್ಟು ಮುಕ್ತ್ಯಾರ್‌ದಾರ ಎಂದರೆ ಸರಿ. ದಾವಾ ಆಸ್ತಿಯ ಸ.ನಂ.227/5 ಅಥವಾ 6 ಇರಬಹುದು 3 ಎಕರೆ 13 ಗುಂಟೆ ಕ್ಷೇತ್ರ ಇರುತ್ತದೆ. ದೇಗಿನಾಳದಿಂದ ಬಸವನ ಬಾಗೇವಾಡಿಗೆ ರಸ್ತೆ ಹೋಗುತ್ತದೆ ಅಂತಾ ದಾವೆಯಲ್ಲಿ ಹೇಳಿ ಬರೆಸಿರುತ್ತೇವೆ ಎಂದರೆ ಸರಿ. ನಮ್ಮ ಜಮೀನಿಗೆ ಸದರಿ ರಸ್ತೆಯ ಮೂಲಕ ಹೋಗಬೇಕು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರು ರಸ್ತೆಯ ಕಾಮಗಾರಿಯನ್ನು ದಾವೆಯಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. 4 ನೇ ಪ್ರತಿವಾದಿಯ ಬಗ್ಗೆ ಈ ದಾವೆಯಲ್ಲಿ ಯಾವುದೇ ತಕರಾರು ಹೇಳಿಕೆ ಹೇಳಿ ಬರೆಸಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ವಿರುದ್ಧ ಯಾವುದೇ ಮಾಗಣಿ ಇಲ್ಲ ಎಂದರೆ ಸರಿ. ಈ ದಾವೆಯಲ್ಲಿ ಕೇಳಿದ ಮಾಗಣಿಗೂ 4 ನೇ ಪ್ರತಿವಾದಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ.

**ಪ್ರತಿವಾದಿ 1 ರಿಂದ 3 ರವರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲಿಗೆ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.